ಗಂಗಾದೇವಿ, ಬೆಂಗಳೂರು
ಬುದ್ಧ, ಗಾಂಧಿ ಯುಗ ಅಂತ್ಯ. ಮುಂದೆ ಯಾವ ಯುಗ?



ಸೈಬರ್ ಮೊದ್ದು, ಟೆಕ್ನಾಲಜಿ ಬುದ್ಧೂಗಳ ಸ್ವಾಹಾ ಯುಗ.

ಬಿ.ಆರ್. ಉಷಾ, ಬೆಂಗಳೂರು
ಮದುವೆಯಾದ ಮೇಲೆ ಹೆಣ್ಣುಮಕ್ಕಳೇ ಏಕೆ ಗಂಡನ ಮನೆಗೆ ಹೋಗಬೇಕು?
ಕರೆಕ್ಟ್. ಪಶುಪಕ್ಷಿಗಳಿಗಿಲ್ಲದ ಕೂಡುಕುಟುಂಬ ನಮಗೇಕೆ! ಪ್ರತ್ಯೇಕ ಫ್ಲ್ಯಾಟ್ ಹಿಡಿಯಿರಿ.

ವಿ. ಹೇಮಂತಕುಮಾರ್, ಬೆಂಗಳೂರು
ಸತಿಯ ಮೇಲೆ ಪ್ರಬಂಧ ಬರೆಯುವ ಧೈರ್ಯ ಪತಿಗೆ ಇದೆಯಾ?
'ಸತಿಯ ಮೇಲೆ' ಅಲ್ಲವೆ! ಟ್ಯಾಟೂ ಆರ್ಟ್ ಬಲ್ಲ ಪತಿಗೆ ಇದ್ದೀತು.

ಕಾವ್ಯಶ್ರೀ, ಶೋರಾಪೂರ
ಸಪ್ತಪದಿಗೂ, ಸಪ್ತಸ್ವರಕ್ಕೂ ವ್ಯತ್ಯಾಸವೇನು?



ಮೊದಲಿಗೆ ಸಪ್ತಪದಿ; ಕೆಲವು ವರ್ಷಗಳಲ್ಲಿ ರಾಗರಾಗವಾಗಿ ಸಪ್ತಸ್ವರ.

ಬಿ. ಬಸವರಾಜ್, ಹರಿಹರ
ಪ್ರಶ್ನೆಗಳು ಕೇಳುಗರ ಮನಸ್ಸಿನ ಭಾವನೆಯ ಪ್ರತಿರೂಪವೆ?
ಕೇಳುಗರ ಹಾಸ್ಯ/ಜ್ಞಾನದಾಹದ ಪ್ರತಿಬಿಂಬ.

ವಿ.ಎಸ್. ಹಿಂದೂಪುರ, ಬಳ್ಳಾರಿ
ಹೆಚ್ಚು ತಿಳಿದವರು ಕಡಿಮೆ ಮಾತನಾಡುವುದರ ರಹಸ್ಯವೇನು?
ಕಡಿಮೆ ಪದದಲ್ಲಿ ಹೆಚ್ಚು ವಿಷಯ ಹೇಳಬಲ್ಲರಾದ್ದರಿಂದ.

ಬಿ. ಚಂದ್ರೇಗೌಡ, ಬೆಂಗಳೂರು
ಸೋಲೇ ಗೆಲುವಿನ ಸೋಪಾನ ಎಂದರೇನು?
'ಸೋಲೇ' ಪದದ ಅಕ್ಕಪಕ್ಕದಲ್ಲಿ 'ನಿಮ್ಮ', 'ನಮ್ಮ' ಎರಡು ಪದಗಳು ಬಿಟ್ಟುಹೋಗಿವೆ ಎಂದು.

ಅ. ಮೃತ್ಯುಂಜಯ, ಪಾಂಡವಪುರ
ಮಾನವೀಯತೆಗೆ ಬೆಲೆ ಎಲ್ಲಿದೆ?
ಬೆಟ್ಟ ಜಾರಿದಾಗ, ನೀರು ನುಗ್ಗಿದಾಗ ಸ್ಪಂದಿಸಿದ ಹೃದಯಗಳಲ್ಲಿ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಪ್ರೀತಿಯನ್ನು ಕುರುಡು ಅಂತಾರೆ. ಯಾಕೆ?
ಕೈತೊಳೆದು ಮುಟ್ಟುವಂತಿರೋವ್ನು ಮುಟ್ಟಿದ್ರೆ ಕೈತೊಳ್ಕೋಬೇಕಾದವ್ನನ್ನ ಪ್ರೀತ್ಸೋದ್ಕಂಡ್ರೆ ಹೀಗನ್ನತ್ತಂತೆ.

ನರಸಿಂಹ ಪೈ, ಕಾಸರಕೋಡ
ಅರಮನೆಗಳು ಅಳಿದರೂ ಗುರುಮನೆಗಳು ಇನ್ನೂ ಉಳಿದಿವೆ. ಏಕೆ?
ಕದಿಯಲಾಗದ ಸಂಪತ್ತು ಇರುವುದರಿಂದ.

ಪಿ. ಶಂಕರಪ್ಪ, ಶಿವಮೊಗ್ಗ
ರಾಜಕೀಯ ವ್ಯಕ್ತಿಗಳ ಆತ್ಮಗೌರವ, ಸ್ವಾಭಿಮಾನ ಎತ್ತ ಸಾಗುತ್ತಿದೆ?
ಅವರಿಂದ ದೂರ... ಬಹಳ ದೂರ...

ಮಂಜುನಾಥ ಕೆ.ಪಿ. ಕೆ.ಟಿ. ಹಳ್ಳಿ
ಶತ್ರುಗಳು ಅಕ್ಕಪಕ್ಕ ಇರಬೇಕು ಎನ್ನುತ್ತಾರೆ. ಏಕೆ ಗುರುವೆ?
ನಮ್ಮ ಹುಷಾರಿನಲ್ಲಿ ನಾವಿರಲು ಅದೇ ಅತ್ಯುತ್ತಮ ಕ್ರಮ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಸಾಯುವ ದಿನ ಮುಂಚಿತವಾಗಿ ಗೊತ್ತಾದರೆ ಹೇಗಿರುತ್ತೆ?
ಮುಂಚಿನ ದಿನವೇ ಮಸಣಕ್ಕೆ ನಡೆವುದರಿಂದ ಆಸ್ಪತ್ರೆ, ಡೆಡ್‌ವ್ಯಾನ್‌ಗೆ ಲಾಸ್ ಆಗತ್ತೆ.

ಮಹಾವೀರ ಕಾಸರ, ಶಿವಮೊಗ್ಗ
ಶವದ ಮೇಲಿನ ಹಾರಗಳನ್ನು ಹರಿದು ದಾರಿಯುದ್ದಕ್ಕೂ ಎಸೆಯುವ ಉದ್ದೇಶವೇನು?
ಗಳಿಸಿದ ಸನ್ಮಾನಗಳೆಲ್ಲ ಸತ್ತ ನಂತರ ಮಣ್ಣುಪಾಲು ಎಂದು ಸೂಚಿಸಲು.

## ಬಹುಮಾನಿತ ಪ್ರಶ್ನೆ

ಸಿ.ಕೆ. ಗಣಪ್ಪನವರ, ಮುಂಡರಗಿ
ಕೈ ಬಾಯಿ ಶುದ್ಧ ಇರುವ ರಾಜಕಾರಣಿಗಳನ್ನು ಹುಡುಕುತ್ತಿದ್ದೇನೆ. ಸಹಾಯ ಮಾಡುವಿರಾ?
ತೋರಿಸುವೆ. ಆದರೆ ಅವರನ್ನು ಎಬ್ಬಿಸುವುದು ಕಷ್ಟ. ಗೋರಿಯಲ್ಲಿ ಮಲಗಿ ವರ್ಷಗಳಾಗಿಬಿಟ್ಟಿವೆ.

ಶೃತಿ ರಿಗ್ರೆಟ್ ಅಯ್ಯರ್, ಅಮೆರಿಕ
ಸ್ನೇಹಿತರ, ವೈರಿಗಳ ನಡುವಿನ ಅಂತರವೆಷ್ಟು?
ಹಿಂತಿರುಗಿಸದ ಒಂದೇ ಒಂದು ಸಾಲದಷ್ಟು.

ಚಾರ್ವಾಕ ಶ್ರೀನಿವಾಸ, ಬೆಂಗಳೂರು
ಭಯದಿಂದ ಭಕ್ತಿಯೋ, ಭಕ್ತಿಯಿಂದ ಭಯವೋ?
ಹ್ಞ! ಭಕ್ತಿಯೆಂದರೆ ಅವಿಚ್ಛಿನ್ನ ನಂಬಿಕೆ. ನಂಬಿಕೆಯಿದ್ದಲ್ಲಿ ಭಯವಿರುವಂತಿಲ್ಲ.

ಜವಳಿ ಜಯಣ್ಣ, ದಾವಣಗೆರೆ
ಮೆದುಳು ಸೂಪರ್ ಕಂಪ್ಯೂಟರ್ ಆದರೆ ಹೊಟ್ಟೆ ಏನು?



ಮೆದುಳು ಕ್ರ್ಯಾಷ್ ಆಗದಂತೆ ತಡೆಯುವ ಫೈರ್‌ವಾಲ್.

ವಸುಂಧರಾ ಸತ್ಯ, ದೊಡ್ಡಬಳ್ಳಾಪುರ
ಸಾಕಪ್ಪಾ ಸಾಕು ಈ ಜೀವನ ಎಂದು ಕೊರಗುವ ಮಂದಿಗೆ ನಿಮ್ಮ ಕಿವಿಮಾತು?
ಮಾತೇಕೆ? ಅವರಿಗೆ ಪ್ರಿಯವಾದ ಆಹಾರ, ವ್ಯಕ್ತಿಯನ್ನು ಮುಂದಿರಿಸಿದರೆ ಪ್ಲೇಟ್ ಚೇಂಜ್!

ಬಿ.ಆರ್. ಉಷಾ, ಕೆನಡಾ
ಉತ್ತರವೇ ಇಲ್ಲದ ಪ್ರಶ್ನೆಗೆ ಉತ್ತಮವಾಗಿ ಉತ್ತರಿಸುವ ನಿಮಗೆ ಉತ್ತಮೋತ್ತಮ ಬಿರುದು ಕೊಡ್ಲಾ?
ಓದುಗರ ತುಟಿಗಳು ಮೋದದಿಂದ ಬಿರಿದರೆ ಅದೇ ದೊಡ್ಡ ಬಿರುದು!

■ ರಾಮ್